"ಅಯ್ಯೋ ಛಾಯಾಗ್ರಹಣದಲ್ಲಿ ಇವೆಲ್ಲಾ ಕಾಮನ್ ಅಲ್ವಾ! ನಾವು ಎಂಥೆಂಥವ್ನೋ ಕಷ್ಟ ಅನುಭವಿಸಿದ್ದೀವಿ. ಇದೆಲ್ಲಾ ಏನು ಮಹಾ ಬಿಡಿ" ಎಂದು ಸುಖಾಸುಮ್ಮನೆ ಕೊಚ್ಚಿಕೊಂಡೆವು. "ಕೇವಲ ಫೋಟೋಗ್ರಫಿ ಮಾಡೋದೇ ಮುಖ್ಯವಲ್ಲ. ಫೋಟೋದಾಚೆಗೆ ಸಿಗುವ ಇಂಥ ಜೀವನಾನುಭವವೂ ಮುಖ್ಯ. ಕಷ್ಟಪಟ್ಟು ತೆಗೆದ ಚಿತ್ರವೇ ಮನಸಲ್ಲಿ, ಬದುಕಲ್ಲಿ ಉಳಿಯುವುದು" ಎಂದು ಲೋಕೇಶ್ ಮೊಸಳೆ ತಮ್ಮ ಫಿಲಾಸಫಿಯ ಭಾಷಣ ಬಿಚ್ಚಿಟ್ಟರು. ಹುಲಿ ಸಿಗುತ್ತೆ ಎನ್ನುವ ಏಕೈಕ ಆಸೆ ಹುಟ್ಟಿದ ಕಾರಣಕ್ಕೆ ನಾವು ಆದ ಎಲ್ಲ ತೊಂದರೆ ತಾಪತ್ರಯಗಳ ಮರೆತು ಅವರಿಬ್ಬರ ಮಾತಿಗೆ ಸಮ್ಮತಿ ಸೂಚಿಸಿ ಕೃತಕ ನಗೆ ಚೆಲ್ಲಿದೆವು.

ಈ ಶಿಕಾರಿ ಮತ್ತು ಫೋಟೋಗ್ರಫಿಯ ನಡವಳಿಕೆಗಳೆರಡೂ ಒಂದೇ ಮಾದರಿಯವು. ಪ್ರಾಣಿಗಳು ಬರುವ ದಾರಿ ಹೊಂಚು ಹಾಕಿ ಕಾಯುವುದು, ಅವುಗಳ ನಡವಳಿಕೆ ಅರ್ಥ ಮಾಡಿಕೊಳ್ಳುವುದು, ಬೇಸರ ಮಾಡಿಕೊಳ್ಳದೆ ಗಂಟೆ, ದಿನಗಳ ಸವೆಸುವುದು ಸಾಮಾನ್ಯ ಸಂಗತಿಗಳು. ಇದೊಂದು ಬಗೆಯ ಧ್ಯಾನದ ಸ್ಥಿತಿ ಎಂದು ಭಾವಿಸಿಕೊಳ್ಳಬಹುದು. ವ್ಯತ್ಯಾಸ ಎಂದರೆ ಶಿಕಾರಿ ಕೊಲ್ಲುವ, ಮೆಲ್ಲುವ ಮನಸ್ಥಿತಿಯಾದರೆ; ಛಾಯಾಗ್ರಹಣ ಸೆರೆ ಹಿಡಿಯುವ, ಸೊಬಗು ಆಸ್ವಾದಿಸುವ ಖುಷಿಯ ಮನೋಭಾವ. ಚಿತ್ರಿಸಿದ ಚಿತ್ರವ ಎಲ್ಲರಿಗೂ ತೋರಿಸಿ ನಲಿದಾಡುವ, ಆದ ಜೀವನಾನುಭಗಳ ಹೀಗೆ ಕೊರೆದು ತಲೆ ತಿನ್ನುವ ಅವಕಾಶ ಕೂಡ.

ನಾವು ಅಲ್ಲಿ ನೋಡಲೆಂದು ಹೋದ ಹುಲಿಗೆ ಎರಡು ಮಕ್ಕಳಿದ್ದವು. ವರ್ಷದ ಹರೆಯದ ಅವುಗಳಿಗೆ ತಾಯಿ ಬೇಟೆ ಕಲಿಸುತ್ತಿತ್ತು. ದಟ್ಟವಾದ ಹುಲ್ಲಿನ ಪೊದೆಯ ನಡುವೆ ಅವು ಬೀಡು ಬಿಟ್ಟಿದ್ದವು. ಪಕ್ಕದಲ್ಲಿ ಹರಿಯುವ ನದಿಗೆ ಸ್ನಾನಕ್ಕೆ ಬರುವ ಮುನ್ಸೂಚನೆ ಕೂಡ ಸಿಕ್ಕಿತ್ತು. ಅವು ಸಾಮಾನ್ಯವಾಗಿ ನೀರಿಗೆ ಇಳಿಯಬಹುದಾದ ಒಂದು ಜಾಗದ ಬದಿಯಲ್ಲಿ ನಮ್ಮ ಜೀಪನ್ನು ಆದಿಲ್ ನಿಲ್ಲಿಸಿದ. ಆಮೇಲೆ ಸುಮ್ಮನೆ ಕೂತು ಕಾಯುವ ಸರದಿ ಶುರುವಾಯಿತು. ಮೊದಲೇ ಈ ಜಾಡಿನ ಸುಳಿವರಿತ ಅನೇಕ ಜೀಪುಗಳು ಬಂದು ಅಲ್ಲಿ ಹೊಂಚು ಹಾಕಿ ನಮಗಿಂತ ಮೊದಲೇ ಝುಂಡಾ ಹೂಡಿದ್ದವು.

ಸಾಧಾರಣವಾಗಿ ಹುಲಿಗಳು ಕಾಡಿನಲ್ಲಿ ಸಂಚರಿಸುವ ಸೂಚನೆಯನ್ನು ಲಂಗೂರ್ ಎಂಬ ಮಂಗನ ಜಾತಿಯ ಕಪ್ಪು ಪ್ರಾಣಿ ಮೊದಲು ಕೊಡುತ್ತದೆ. ಕೆಲವೊಮ್ಮೆ ಜಿಂಕೆ, ಸಾರಂಗಗಳೂ ಗಾಬರಿಯಲ್ಲಿ ಕೂಗಿ ವಿಷಯ ತಿಳಿಸುತ್ತವೆ. ದಟ್ಟವಾದ ಕಾಡಿನಲ್ಲಿ ಇವು ಕೊಡುವ ಭಯದ ಈ ಶಬ್ದ ಸುಳಿವೇ ಅತಿ ಮಹತ್ವದ್ದು. ಈ ಎಚ್ಚರಿಕೆಯ ಕರಗಂಟೆಗೆ ಫೋಟೋಗ್ರಾಫರ್‌ಗಳು 'ಕಾಲ್' ಎಂದು ಕರೆಯುತ್ತಾರೆ. ಆದರೆ ಬಹಳಷ್ಟು ಸಲ ಈ ಅಲಾರಾಂ ಕಾಲ್ ಖಚಿತವೂ, ನಂಬಲರ್ಹವೂ ಆಗಿರುವುದಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ.

ಕೆಲ ಪಕ್ಷಿಗಳೂ ಸಹ ಹುಲಿಯಾಗಮನ ಸಂದೇಶವನ್ನು ತಮ್ಮ ಭಯದ ದನಿಯಲ್ಲಿ ವ್ಯಕ್ತಪಡಿಸುತ್ತವೆ. ಇದನ್ನೆಲ್ಲಾ ಅರ್ಥಮಾಡಿಕೊಳ್ಳಲು ಒಂದಿಷ್ಟು ಕೌಶಲವೂ ಅನುಭವವೂ ಬೇಕಾಗುತ್ತದೆ. ಪರಿಸರದ ಪಂಡಿತರು (ನ್ಯಾಚುರಲಿಸ್ಟ್) ಇದನ್ನೆಲ್ಲಾ ಚೆನ್ನಾಗಿ ಅರಿತು ವಿವರಿಸುತ್ತಾರೆ. ಜಿಮ್ ಕಾರ್ಬೆಟ್ ಕಾಡಿನಲ್ಲಿ ಇಂತಹ ನುರಿತ ತಜ್ಞರು ಪ್ರತಿ ಜೀಪಿಗೊಬ್ಬರು ಕಡ್ಡಾಯವಾಗಿ ಇದ್ದೇ ಇರುತ್ತಾರೆ. ಇವರ ಮಾರ್ಗದರ್ಶನದಲ್ಲೇ ಫೋಟೋಗ್ರಫಿ ಸವಾರಿ ನಡೆಯುವುದು. ದಿನಾ ಕಾಡನ್ನು ಬಿಡದೆ ಸುತ್ತುವ ಅವರು ಹುಲಿ ಹೆಜ್ಜೆ ಗುರುತುಗಳ ಮೂಲಕ ಅವುಗಳ ಚಲನವಲನಗಳನ್ನು, ಓಡಾಡುವ ಹಾದಿಗಳನ್ನು ಗ್ರಹಿಸುತ್ತಾರೆ. ಊಹೆ ಮತ್ತು ದಟ್ಟ ಅನುಭವದ ತರ್ಕದಿಂದ ಇದೆಲ್ಲ ಒಂದು ಅಂದಾಜಿನಲ್ಲಿ ನಡೆಯುತ್ತವೆ. ಈ ಪರಿಯನ್ನು ಅಗೋಚರ ಜ್ಞಾನ ಮಾರ್ಗ ಎಂದೂ ಕರೆಯಬಹುದು. ಕಾಡಿನ ಈ ಭಾಷೆ ತಿಳಿಯುವುದು ಒಂದು ಮಹಾನ್ ವಿದ್ಯೆಯೇ ಹೌದು.

ಗಂಟೆಗಟ್ಟಲೆ ಕಾಯುವಾಗ ಸನಿಹದಲ್ಲೇ ಚರಪರ ಎಂದು ಸದ್ದಾಯಿತು. ನಾವೆಲ್ಲಾ ಜಾಗೃತವಾಗಿ ಎದ್ದು ನಿಂತೆವು. ಇಂಥ ಸಮಯದಲ್ಲಿ ಮೈ ಮನಗಳು ವಿಪರೀತ ಉತ್ತೇಜನಕ್ಕೆ ಒಳಗಾಗುತ್ತವೆ. ಒಂದು ಸಣ್ಣ ಆತಂಕ, ಗಾಬರಿ, ಮನದಲ್ಲಿ ಉಂಟಾಗುತ್ತದೆ. ಈಗ ಯಾವುದೇ ಕ್ಷಣದಲ್ಲಿ ನಾವು ಕಾಯುವ ಹುಲಿಗಳು ಪೊದೆಯಿಂದ ಈಚೆಗೆ ಇಣುಕಬಹುದು. ಆದರೆ ಎಲ್ಲಿಂದ ಬರಬಹುದೆಂಬುದು ಯಾರಿಗೂ ಗೊತ್ತಿರುವುದಿಲ್ಲ. ಎಲ್ಲವೂ ಊಹೆಯಷ್ಟೆ. ಎಷ್ಟೋ ಸಲ ಎದುರಿಗೆ ಬರಬಹುದೆಂದು ಕಾಯುವ ಹುಲಿ ನಿಶ್ಯಬ್ದವಾಗಿ ಹಿಂಬದಿಯಿಂದ ಬಂದು ನಿಂತ ಸಂದರ್ಭಗಳೂ ನಡೆದಿವೆ. ಅನೇಕ ಸಲ ಹುಲಿ, ಚಿರತೆ, ಆನೆಗಳು